**ಶ್ರೀ. ಶಿವಾನಂದ್ ಎಸ್ ದುಲಂಗೆ ಇವರು ಸರ್ವೆ.ನಂ–88/1, 88/2 (ಪಿ) ಮತ್ತು 88/2, ಜಾಲವಾಡಗಿ ಗ್ರಾಮ, ಮಸ್ಕಿ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 23–19 ಎಕರೆ (9.40 ಹೆಕ್ಟೇರ್) ಪ್ರದೇಶದಲ್ಲಿ ವಾರ್ಷಿಕ 78,247.89 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯ ಯೋಜನೆಯ ಕುರಿತು ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.**

**ದಿನಾಂಕ: 15.11.2022.**

**ಸಮಯ: ಬೆಳಿಗ್ಗೆ 11.00 ಘಂಟೆ.**

**ಸ್ಥಳ: ಯೋಜನಾ ಸ್ಥಳ**

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | ಸರ್ವೆ.ನಂ–88/1, 88/2 (ಪಿ) ಮತ್ತು 88/2, ಜಾಲವಾಡಗಿ ಗ್ರಾಮ, ಮಸ್ಕಿ ತಾಲ್ಲೂಕು, ರಾಯಚೂರು ಜಿಲ್ಲೆ |
| ಹಾಜರಿದ್ದ ಅಧಿಕಾರಿಗಳ ವಿವರ | ಅನುಬಂಧ–1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿಧಿಗಳ ವಿವರ | ಅನುಬಂಧ–2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | ಅನುಬಂಧ–3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | ಅನುಬಂಧ–4 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | ಅನುಬಂಧ–5 |

**ಪೀಠಿಕೆ:**

ಶ್ರೀ. ಶಿವಾನಂದ್ ಎಸ್ ದುಲಂಗೆ ಇವರು ಸರ್ವೆ.ನಂ–88/1, 88/2 (ಪಿ) ಮತ್ತು 88/2, ಜಾಲವಾಡಗಿ ಗ್ರಾಮ, ಮಸ್ಕಿ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 23–19 ಎಕರೆ (9.40 ಹೆಕ್ಟೇರ್) ಪ್ರದೇಶದಲ್ಲಿ ವಾರ್ಷಿಕ 78,247.89 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಜಾರಿಗೊಳಿಸಿರುವ ದಿನಾಂಕ : 14.09.2006 (ತಿದ್ದುಪಡಿ ದಿನಾಂಕ :01.12.2009) ರ ಪರಿಸರ ಆಘಾತ ಅಧ್ಯಯನದ ಅಧಿಸೂಚನೆಯಂತೆ ಶ್ರೀ. ಶಿವಾನಂದ್ ಎಸ್ ದುಲಂಗೆ ಇವರು ಸರ್ವೆ.ನಂ–88/1, 88/2 (ಪಿ) ಮತ್ತು 88/2, ಜಾಲವಾಡಗಿ ಗ್ರಾಮ, ಮಸ್ಕಿ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ 23–19 ಎಕರೆ (9.40 ಹೆಕ್ಟೇರ್) ಪ್ರದೇಶದಲ್ಲಿ ವಾರ್ಷಿಕ 78,247.89 ಟನ್‌ಗಳಷ್ಟು ಸಾಮಾನ್ಯ ಮರಳು ಗಣಿಗಾರಿಕೆಯ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.

ಸದರಿ ಯೋಜನೆಗೆ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ (SEIAA, Karnataka) ಇವರ Terms Of Reference ಪತ್ರದ ಸಂಖ್ಯೆ: SEIAA 666 MIN 2021, ದಿನಾಂಕ: 17.02.2022 ಮತ್ತು ದಿನಾಂಕ: 25.07.2022 ರಂದು ಉದ್ದಿಮೆಯವರು ನೀಡಿದ ನಿವೇದನೆ ಪತ್ರದ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಸಾರ್ವಜನಿಕ ಪರಿಸರ ಸಭೆಯನ್ನು ದಿನಾಂಕ: 15.11.2022 ರಂದು ಸದರಿ ಯೋಜನೆಯ ಯೋಜನಾ ಸ್ಥಳ, ಸರ್ವೆ.ನಂ–88/1,

88/2 (ಪಿ) ಮತ್ತು 88/2, ಜಾಲವಾಡಗಿ ಗ್ರಾಮ, ಮಸ್ಕಿ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಪರಿಸರ ಆಘಾತ ಅಧ್ಯಯನ ಅಧಿಸೂಚನೆ, 2006 ರ ಅನ್ವಯ ಸದರಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ 30 ದಿನಗಳ ಮೊದಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪತ್ರಿಕೆಗಳಾದ **"ಹೊಸದಿಗಂತ"** (ಕನ್ನಡ), **" ದಿ ಟೈಮ್ಸ್ ಆಫ್ ಇಂಡಿಯಾ"** (ಆಂಗ್ಲ) ಭಾಷೆಯಲ್ಲಿ ದಿನಾಂಕ: 14.10.2022 ರಂದು ಹಾಗೂ ಸ್ಥಳೀಯ ಮಟ್ಟದಲ್ಲಿ **"ಸುದ್ದಿಮೂಲ"** ದಿನ ಪತ್ರಿಕೆಯಲ್ಲಿ ದಿನಾಂಕ: 18.10.2022 ಪತ್ರಿಕಾ ಪ್ರಕಟಣೆಗಳನ್ನು ರಂದು ನೀಡಲಾಗಿತ್ತು ಹಾಗೂ ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ-ಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ರಾಯಚೂರು ಜಿಲ್ಲೆ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಮೇಲಿನ ಪ್ರಕಟಣೆಯಂತೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮೇಲೆ ನಿಗದಿಪಡಿಸಿದ ಸ್ಥಳದಲ್ಲಿ ದಿನಾಂಕ: 15.11.2022 ರಂದು ಬೆಳಿಗ್ಗೆ 11.00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ರಾಯಚೂರು ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಸಭೆಯ ಆರಂಭದಲ್ಲಿ ಶ್ರೀ ನಾಗನೂರು, ಯೋಜನೆ ಪರಿಸರ ಸಲಹೆಗಾರರು, ಮೆ॥ ಅಲ್ಟ್ರಾ-ಟೆಕ್ ಎನ್ವಿರಾನ್ಮೆಂಟಲ್ ಕನ್ಸಲ್ಟೆನ್ಸಿ & ಲ್ಯಾಬೋರೇಟರಿ ರವರು, ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ, ಡಾ. ದುರಗೇಶ್, ಕೆ.ಎ.ಎಸ್., ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ರಾಯಚೂರು ಜಿಲ್ಲೆ, ಶ್ರೀಮತಿ. ಕವಿತಾ ಆರ್. ತಹಸೀಲ್ದಾರ, ಮಸ್ಕಿ ರವರನ್ನು ಮತ್ತು ಶ್ರೀ. ಎಂ.ಎಸ್.ನಟೇಶ್, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ರಾಯಚೂರು ಹಾಗೂ ಸಭೆಗೆ ಆಗಮಿಸಿದ್ದ ಸರ್ಕಾರಿ ಅಧಿಕಾರಿಗಳು ಮತ್ತು ಸಭೆಯಲ್ಲಿ ಉಪಸ್ಥಿತರಿದ್ದ ಜಾಲವಾಡಗಿ, ಉಟಕನೂರು ಗ್ರಾಮಸ್ಥರು, ಸಾರ್ವಜನಿಕರಿಗೆ, ಪರಿಸರ ಸರ್ಕಾರೇತರ ಸಂಸ್ಥೆ ಪ್ರತಿನಿಧಿಗಳಿಗೆ ಮತ್ತು ಮಾಧ್ಯಮದವರಿಗೆ ಸ್ವಾಗತವನ್ನು ಕೋರಿದರು.

ಶ್ರೀ. ಪ್ರಸನ್ನ ಕುಮಾರ್, ಯೋಜನೆಯ ಪರಿಸರ ಸಲಹೆಗಾರರು ಯೋಜನೆಯ ಕಾರ್ಯ ಚಟುವಟಿಕೆಗಳ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ಮಂಡಿಸಿದರು. ಸದರಿ ವಿವರಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

ಮೇಲಿನ ಯೋಜನೆ ವಿವರಗಳನ್ನು ಮಂಡಿಸಿದ ಮೇರೆಗೆ, ಸಭೆಯ ಅಧ್ಯಕ್ಷತೆ ವಹಿಸಿದ್ದ ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಸಭೆಯಲ್ಲಿ ಹಾಜರಿದ್ದ ಸ್ಥಳೀಯ ಗ್ರಾಮಸ್ಥರು ಹಾಗೂ ಇತರೆ ಸಾರ್ವಜನಿಕರಿಗೆ ತಮ್ಮ ಅಭಿಪ್ರಾಯ/ಅನಿಸಿಕೆಗಳನ್ನು ಸಭೆಯ ಮುಂದೆ ಮೌಖಿಕವಾಗಿ ಅಥವಾ ಲಿಖಿತವಾಗಿ ಮಂಡಿಸಲು ತಿಳಿಸಿದರು.

ಮೇಲಿನ ಸೂಚನೆಯಂತೆ, ಸಾರ್ವಜನಿಕರು, ಗ್ರಾಮಸ್ಥರು ಈ ಕೆಳಕಂಡಂತೆ ತಮ್ಮ ಅಭಿಪ್ರಾಯ ಮಂಡಿಸಿದರು.

1. ಶ್ರೀ. ರಮೇಶ್ ತಂದೆ ದುರ್ಗಪ್ಪ, ಜಾಲವಾಡಗಿ :–

ಇವರು ತಮ್ಮ ಮೌಖಿಕ ಅಭಿಪ್ರಾಯವನ್ನು ಮಂಡಿಸುತ್ತಾ, ಈ ಯೋಜನೆಯಲ್ಲಿ ಸ್ಥಳೀಯ ಜನರಿಗೆ ಉದ್ಯೋಗ ನೀಡಬೇಕೆಂದು ತಿಳಿಸಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಉತ್ತರಿಸುತ್ತಾ, ಸ್ಥಳೀಯರಿಗೆ ಆದ್ಯತೆ ಕೊಡುವ ಬಗ್ಗೆ ಪ್ರಾಜೆಕ್ಟ್‌ನಲ್ಲಿ ಯೋಜನೆ ಹಾಕಿಕೊಂಡಿದ್ದು, ಗಿಡಗಳನ್ನು ನೆಡುವ ವ್ಯವಸ್ಥೆ, ಮೈನಿಂಗ್ ಮಾಡುವ ಸಂದರ್ಭದಲ್ಲಿ ನೀರನ್ನು ಸಿಂಪಡಿಸುವುದರಿಂದ ಜನರಿಗೆ ಉಸಿರಾಟದ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಮೊದಲು ಜಾಲವಾಡಗಿ ಗ್ರಾಮಕ್ಕೆ ಸಂಬಂಧಪಟ್ಟಂತೆ ಪ್ರಾಥಮಿಕ ಶಾಲಾ ಮಕ್ಕಳಿಗೆ ಡೆಸ್ಕ್ ವ್ಯವಸ್ಥೆ ಮಾಡುವುದು, ಶೌಚಾಲಯದ, ದೇವಸ್ಥಾನಗಳ ಜಿರ್ಣೋದ್ದಾರ ಮಾಡುವುದು, ಊರಿನ ಜನರಿಗೆ ಮೆಡಿಕಲ್ ವ್ಯವಸ್ಥೆ ಮಾಡುವುದು, ಉದ್ದಿಮೆಯಲ್ಲಿ ಕೆಲಸ ಮಾಡುವವರಿಗೆ ಪ್ರತಿ ತಿಂಗಳಿಗೊಮ್ಮೆ ಮೆಡಿಕಲ್ ಚೆಕ್–ಅಪ್ ಮಾಡುವ ಬಗ್ಗೆ ಯೋಜನೆದಾರರು ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

2. ಶ್ರೀ. ಶಿವರಾಜ್, ಉಟಕನೂರು :–

ಇವರು ತಮ್ಮ ಮೌಖಿಕ ಅಭಿಪ್ರಾಯವನ್ನು ಮಂಡಿಸುತ್ತಾ, ಈ ಯೋಜನೆಯಿಂದ ಬರುವ ಲಾಭದಲ್ಲಿ ಗ್ರಾಮದ ಶಾಲೆ ಅಭಿವೃದ್ಧಿ ಪಡಿಸಬೇಕು ಮತ್ತು ಶೌಚಾಲಯ ನಿರ್ಮಿಸಬೇಕೆಂದು ತಿಳಿಸಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಈ ಯೋಜನೆಯ ಸಿ.ಎಸ್.ಆರ್. ನಿಧಿಯಡಿ ಪ್ರತಿ ವರ್ಷ ಕಾರ್ಯ ಯೋಜನೆ ರೂಪಿಸಿ, ಸಮಿತಿ ಮೇಲ್ವಿಚಾರಣೆಯಲ್ಲಿ ಮೇಲಿನ ಕಾರ್ಯಗಳಿಗೆ ಬಳಸಲಾಗುವುದು ಎಂದು ತಿಳಿಸಿದರು.

3. ಶ್ರೀ. ಸಿದ್ದಪ್ಪ, ಉಟಕನೂರು :–

ಇವರು ತಮ್ಮ ಅಭಿಪ್ರಾಯ ಮಂಡಿಸುತ್ತಾ, ಜಾಲವಾಡಗಿ ಮತ್ತು ಉಟಕನೂರು ಗ್ರಾಮಗಳ ಮಧ್ಯೆ ಸರಿಯಾದ ರಸ್ತೆ ಇಲ್ಲದಿರುವುದರಿಂದ, ಇದನ್ನು ಯೋಜನೆದಾರರು ತಮ್ಮ ಯೋಜನೆಯಿಂದ ಬರುವ ಲಾಭದಲ್ಲಿ ಸರಿಪಡಿಸಬೇಕೆಂದು ಕೋರಿದರು.

ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಪ್ರತಿ ವರ್ಷ ಕಾರ್ಯ ಯೋಜನೆ ಅಡಿ, ಸಮಿತಿ ಮೇಲ್ವಿಚಾರಣೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

4. ಮಂಜುಳಾ, G.K. Education & Rural Urban Development Society (R), ಚಿತ್ರದುರ್ಗ :–

ಇವರು ಯೋಜನೆಯನ್ನು ಬೆಂಬಲಿಸುತ್ತಾ ತಮ್ಮ ಮೌಖಿಕ ಅಭಿಪ್ರಾಯ ನೀಡಿದರು ಹಾಗೂ ಈ ಯೋಜನೆಯಲ್ಲಿ ಸ್ಥಳೀಯರಿಗೆ ಉದ್ಯೋಗ ನೀಡಬೇಕೆಂದು ತಿಳಿಸಿದರು. ಮುಂದುವರೆದು ಸದರಿಯವರು ಲಿಖಿತ ರೂಪದಲ್ಲಿ ಸಹ ಅಭಿಪ್ರಾಯ ನೀಡಿರುತ್ತಾರೆ. ಸದರಿಯವರ ಪತ್ರವನ್ನು ಅನುಬಂಧ–6 ರಲ್ಲಿ ಲಗತ್ತಿಸಲಾಗಿದೆ.

5. **ಶ್ರೀ. ಬಿ.ವಿ. ರೆಡ್ಡಿ, Shakthi Environment Rural Development Society, ಬಳ್ಳಾರಿ :-**

ಇವರು ತಮ್ಮ ಸಂಸ್ಥೆಯ ವತಿಯಿಂದ ಯೋಜನೆಯನ್ನು ಬೆಂಬಲಿಸುತ್ತಾ ಲಿಖಿತ ರೂಪದಲ್ಲಿ ಅಭಿಪ್ರಾಯ ನೀಡಿರುತ್ತಾರೆ. ಸದರಿಯವರ ಪತ್ರವನ್ನು ಅನುಬಂಧ-7 ರಲ್ಲಿ ಲಗತ್ತಿಸಲಾಗಿದೆ.

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ದಂಡಾಧಿಕಾರಿಗಳು, ಸಭೆಯನ್ನು ಮುಕ್ತಾಯಗೊಳಿಸುತ್ತಾ, ಮೇಲಿನ ವಿಡಿಯೋ ತುಣುಕುಗಳ (ಸಿ.ಡಿ) ಅಭಿಪ್ರಾಯಗಳು ಮತ್ತು ಲಿಖಿತ ಅಭಿಪ್ರಾಯಗಳನ್ನು ದಾಖಲಿಸಿ ಸರ್ಕಾರಕ್ಕೆ ರವಾನಿಸಲಾಗುವುದು ಎಂದು ತಿಳಿಸಿದರು.

6. **ಶ್ರೀ. ವಿ. ನವೀನ್, Coordinator, Gnana Jyothi Rural Development Society, (Environment Development Organization) (NGO), ತುಮಕೂರು :-**

ಇವರು ತಮ್ಮ ಸಂಸ್ಥೆಯ ವತಿಯಿಂದ ಯೋಜನೆಯನ್ನು ಬೆಂಬಲಿಸುತ್ತಾ ಲಿಖಿತ ರೂಪದಲ್ಲಿ ಅಭಿಪ್ರಾಯ ನೀಡಿರುತ್ತಾರೆ. ಸದರಿಯವರ ಪತ್ರವನ್ನು ಅನುಬಂಧ-8 ರಲ್ಲಿ ಲಗತ್ತಿಸಲಾಗಿದೆ.

7. **ಶ್ರೀ. ಬಸವಲಿಂಗಪ್ಪ, ಉಟಕನೂರು :-**

ಇವರು ತಮ್ಮ ಅಭಿಪ್ರಾಯ ಮಂಡಿಸುತ್ತಾ, ತಮ್ಮ ಗ್ರಾಮದ ಶಾಲೆಗೆ ಶೌಚಾಲಯವನ್ನು ತ್ವರಿತವಾಗಿ ನಿರ್ಮಿಸಲು ಕೋರಿದರು ಹಾಗೂ ಗ್ರಾಮಕ್ಕೆ ಹೆಚ್ಚಿನ ಸೌಲಭ್ಯ ಒದಗಿಸಲು ಯೋಜನೆಗೆ ತ್ವರಿತವಾಗಿ ಅನುಮೋದನೆ ನೀಡಲು ಕೋರಿದರು.

8. **ಶ್ರೀ. ಬಸವ ನಾಯಕ್, ಉಟಕನೂರು :-**

ಇವರು ತಮ್ಮ ಅಭಿಪ್ರಾಯ ಮಂಡಿಸುತ್ತಾ, ಗ್ರಾಮದ ಅಭಿವೃದ್ಧಿ ದೃಷ್ಟಿಯಿಂದ ಯೋಜನೆಗೆ ತ್ವರಿತವಾಗಿ ಅನುಮೋದನೆ ನೀಡಲು ಕೋರಿದರು.

9. **ಟಿ.ಎನ್.ಪ್ರಭಾವತಿ, Mother Dreams Rural & Urban Education Development Society (R), ಚಿತ್ರದುರ್ಗ :-**

ಇವರು ತಮ್ಮ ಸಂಸ್ಥೆಯ ವತಿಯಿಂದ ಯೋಜನೆಯನ್ನು ಬೆಂಬಲಿಸುತ್ತಾ ಲಿಖಿತ ರೂಪದಲ್ಲಿ ಅಭಿಪ್ರಾಯ ನೀಡಿರುತ್ತಾರೆ. ಸದರಿಯವರ ಪತ್ರವನ್ನು ಅನುಬಂಧ-9 ರಲ್ಲಿ ಲಗತ್ತಿಸಲಾಗಿದೆ.

10. **ಶ್ರೀ. ಹನುಮಂತ ಕುಮಾರ್. ಎನ್, ಡಾ॥ ಬಿ.ಆರ್. ಅಂಬೇಡ್ಕರ್ ಸಾಹಿತ್ಯ ಸಾಂಸ್ಕೃತಿಕ ಕ್ರೀಡಾ ಕಲಾ ಯುವಕರ ಸಂಘ (ರಿ), ಚಿತ್ರದುರ್ಗ :-**

ಇವರು ತಮ್ಮ ಸಂಸ್ಥೆಯ ವತಿಯಿಂದ ಯೋಜನೆಯನ್ನು ಬೆಂಬಲಿಸುತ್ತಾ ಲಿಖಿತ ರೂಪದಲ್ಲಿ ಅಭಿಪ್ರಾಯ ನೀಡಿರುತ್ತಾರೆ. ಸದರಿಯವರ ಪತ್ರವನ್ನು ಅನುಬಂಧ-10 ರಲ್ಲಿ ಲಗತ್ತಿಸಲಾಗಿದೆ.

**11. ವಿನುತ, Ashraya Rural & Environment Development Society, ಹೊಲಕೆರೆ :-**

ಇವರು ತಮ್ಮ ಸಂಸ್ಥೆಯ ವತಿಯಿಂದ ಯೋಜನೆಯನ್ನು ಬೆಂಬಲಿಸುತ್ತಾ ಲಿಖಿತ ರೂಪದಲ್ಲಿ ಅಭಿಪ್ರಾಯ ನೀಡಿರುತ್ತಾರೆ. ಸದರಿಯವರ ಪತ್ರವನ್ನು ಅನುಬಂಧ–11 ರಲ್ಲಿ ಲಗತ್ತಿಸಲಾಗಿದೆ.

**12. ಶ್ರೀ. ಬಿ. ವೆಂಕಟೇಶ್, Haritha Educational Rural Welfare Society, Uravakonda, Ananthapuramu Dist. (A.P) :-**

ಇವರು ತಮ್ಮ ಸಂಸ್ಥೆಯ ವತಿಯಿಂದ ಯೋಜನೆಯನ್ನು ಬೆಂಬಲಿಸುತ್ತಾ ಲಿಖಿತ ರೂಪದಲ್ಲಿ ಅಭಿಪ್ರಾಯ ನೀಡಿರುತ್ತಾರೆ. ಸದರಿಯವರ ಪತ್ರವನ್ನು ಅನುಬಂಧ–12 ರಲ್ಲಿ ಲಗತ್ತಿಸಲಾಗಿದೆ.

**13. ಮಾಲತಿ ಜೆ. Mother Teresa Education & Charitable Trust (R), ಬೀದರ್ :-**

ಇವರು ತಮ್ಮ ಸಂಸ್ಥೆಯ ವತಿಯಿಂದ ಯೋಜನೆಯನ್ನು ಬೆಂಬಲಿಸುತ್ತಾ ಲಿಖಿತ ರೂಪದಲ್ಲಿ ಅಭಿಪ್ರಾಯ ನೀಡಿರುತ್ತಾರೆ. ಸದರಿಯವರ ಪತ್ರವನ್ನು ಅನುಬಂಧ–13 ರಲ್ಲಿ ಲಗತ್ತಿಸಲಾಗಿದೆ.

ಶ್ರೀಮತಿ. ಸುಗಂಧಾ ಬಿ ಕುರಿ, ಉಪ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ರಾಯಚೂರು ಇವರು ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಪರಿಸರ ಅಧಿಕಾರಿಗಳು ಹಾಗೂ**
**ಸಭಾ ಸಮಾವೇಶಕರು**
**ಪರಿಸರ ಸಾರ್ವಜನಿಕ ಆಲಿಕೆ ಸಭೆ**
**ರಾಯಚೂರು**

15/11/2022

**ಅಪರ ಜಿಲ್ಲಾಧಿಕಾರಿಗಳು ಮತ್ತು**
**ಅಪರ ಜಿಲ್ಲಾ ದಂಡಾಧಿಕಾರಿಗಳು ಮತ್ತು**
**ಪರಿಸರ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷರು,**
**ರಾಯಚೂರು**